ಶ್ರೀ ಎಚ್. ವಿಶ್ವಾಂತಯ್ಯ.— ಈ ವಿಷಯವು ತಮ್ಮ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದಕ್ಕೆ ಹೇಳಿದೆ. ನಿರ್ದಿಷ್ಟವಾದ ಪ್ರಕರಣವನ್ನು ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದೂ ಹೇಳಿದರೆ ಆ ಪ್ರಶ್ನೆ ಬೇರೆ. ಆದರೆ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂಬುದನ್ನು ನಾವು ಒಪ್ಪುವುದಿಲ್ಲ.

ಶ್ರೀ ಕೆ.ಎಚ್. ರಂಗನಾಥ್.—ನಿರ್ದಿಷ್ಟವಾದ ಆಪಾದನೆ ಬಂದರೆ ಕ್ರಮ ತೆಗೆದುಕೊಳ್ಳುತ್ತೇವೆ. ಕಾನೂನಿನ ಕೆಳಗೆ, ಕಾನೂನಿನ ಚೌಕಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಕಾನೂನು ವಿರೂದ್ಧ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕೆ ನಾನು ಹಿಂದೆ ಪ್ರಸ್ತಾಪ ಮಾಡಿ ಎಜುಕೇಷನ್ ಬಿಲ್ ಬಂದಾಗ ಅನುಕೂಲವಾಗುತ್ತದೆ ಎಂದು ಹೇಳಿದ್ದೆ. ಮತ್ತೆ ಬೇರೆ ಏನು ಮಾಡಬೇಕು ಎಂಬ ಬಗ್ಗೆ ಇಲಾಖೆ ಯೋಚಿಸುತ್ತಿದೆ. ಇದು ಏನು ವ್ಯಾಪಕವಾಗಿ ಹರಡಿದ ಇದನ್ನು ಯಾವ ರೀತಿ ನಿಲ್ಲಿಸಬೇಕು, ತೆಗೆದುಹಾಕಬೇಕು ಎಂಬ ಬಗ್ಗೆ ಯೋಚನೆ ಮಾಡುತ್ತಿದ್ದೇವೆ.

ಕೊಪ್ಪಳದ ಬಾಲಕರ ಸರ್ಕಾರದ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಿಗೆ ಅಂಗ ಸಂಸ್ಥೆಗಳ ಜವಾಬ್ದಾರಿ

ಶ್ರೀ. ಎಂ. ಬಿ. ದಿವಟರ್ (ಕೊಪ್ಪಳ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೮) ಕೊಪ್ಪಳದ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಿಗೆ ಎಷ್ಟು ಅಂಗ ಸಂಸ್ಥೆಗಳ ಆಡಳಿತ ನೋಡಿಕೊಳ್ಳುವ ಜವಾಬ್ದಾರಿಯನ್ನು ವಹಿಸಲಾಗಿದೆ ?

ಆ) ಒಬ್ಬ ವ್ಯಕ್ತಿಯು ಅನೇಕ ಅಂಗ ಸಂಸ್ಥೆಗಳ ಆಡಳಿತವನ್ನು ನೋಡಿಕೊಳ್ಳುವುದು ಸಾಧ್ಯವೇ?

ಇ) ಹಾಗಿಲ್ಲದಿದ್ದಲ್ಲಿ ಪ್ರತಿಯೊಂದು ಅಂಗ ಸಂಸ್ಥೆಗೆ ಪ್ರತ್ಯೇಕವಾಗಿ ಅಧಿಕಾರಿಯನ್ನು ನೇಮಿಸಲು ಕ್ರಮಕೈಗೊಳ್ಳಲಾಗುವುದೇ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ಕೊಪ್ಪಳ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಿಗೆ ಈ ಕೆಳಕಂಡ ಸಂಸ್ಥೆಗಳ ಆಡಳಿತ ವಹಿಸಲಾಗಿದೆ.

೧. ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಸಂಬಂಧಿಸಿದ ಕಾಲೇಜು ವಿಭಾಗ, ಪ್ರೌಢ ಶಾಲಾ ವಿಭಾಗ ಮತ್ತು ವೃತ್ತಿ ಶಿಕ್ಷಣ ವಿಭಾಗ.

೨. ಅದೇ ಕಟ್ಟಡದಲ್ಲಿ ನಡೆಯುತ್ತಿರುವ ಶಿಕ್ಷಕರ ತರಬೇತಿ ಸಂಸ್ಥೆಗಳು ಮತ್ತು

೩. ಪ್ರೀ ವೊಕೇಷನಲ್ ಸೆಂಟರ್.

ಆ) ಒಂದೇ ವ್ಯಕ್ತಿಯು ಹಲವು ಸಂಸ್ಥೆಗಳ ಮೇಲ್ವಿಚಾರಣೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುವುದು ಕಷ್ಟ ಸಾಧ್ಯ.

ಇ) ಹೌದು. ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ. ಬಿ. ದಿವಟರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಿನ್ಸಿಪಾಲರಿಗೆ ಕಾಲೇಜು ವಿಭಾಗ, ಪ್ರೌಢಶಾಲಾ ವಿಭಾಗ ಮತ್ತು ವೃತ್ತಿ ಶಿಕ್ಷಣ ವಿಭಾಗ ಅಲ್ಲದೆ ಶಿಕ್ಷಕರ ತರಬೇತಿ ಸಂಸ್ಥೆಗಳು ಮತ್ತು ಪ್ರೀ ವೊಕೇಷನಲ್ ಸೆಂಟರ್ ಇಷ್ಟರ ಆಡಳಿತವನ್ನು ವಹಿಸಲಾಗಿದೆ ಎಂದು ಹೇಳಿದ್ದಾರೆ. ಇಷ್ಟೊಂದು ವಿಭಾಗಗಳ ಆಡಳಿತವನ್ನು ಒಬ್ಬ ಪ್ರಿನ್ಸಿಪಾಲರು ನೋಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಶಿಕ್ಷಕರ ತರಬೇತಿ ಕೇಂದ್ರಕ್ಕೆ ಬೇರೆ ವ್ಯವಸ್ಥೆ ಮಾಡಿ ಎಂದೂ ಪ್ರತಿ ವರ್ಷ ಸರ್ಕಾರಕ್ಕೆ ಮಾನವಿ ಕಳುಹಿಸುತ್ತಿದ್ದೇವೆ. ಸರ್ಕಾರದವರು ಎಕಾನಮಿ ಮೆಷರ್ ಇದೆ ಎಂದು ನಮ್ಮ ಮಾನವಿಯನ್ನು ಪ್ರತಿ ವರ್ಷ ರಿಜೆಕ್ಟ್ ಮಾಡುತ್ತಿದ್ದಾರೆ. ಆದ್ದರಿಂದ ಶಿಕ್ಷಕರ ತರಬೇತಿ ಕೇಂದ್ರಕ್ಕೆ, ಅದನ್ನು ಬೇರೆ ಮಾಡಿ ವ್ಯವಸ್ಥೆ ಮಾಡುತ್ತೀರಾ ? ಅದಕ್ಕೆ ಹೆಚ್ಚಿನ ಖರ್ಚು ಬರುವುದಿಲ್ಲ. ಬರೀ ಸೂಪರಿಂಟೆಂಡೆಂಟ್ ಒದಗಿಸಿದರೆ ಸಾಕು, ಬೇರೆ ಸ್ಟಾಫ್ ಇದೆ. ದಯವಿಟ್ಟು ಈ ವರ್ಷ ಬೈಫರ್‌ಕೇಷನ್ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಇಷ್ಟರಲ್ಲೇ ಅದನ್ನು ಮಾಡೋಣ.

ಅಧ್ಯಕ್ಷರು.—ಜಯಚಂದ್ರ ಅವರೆ, ನಿಮ್ಮ ಪ್ರಶ್ನೆಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆ.

ಶ್ರೀ ಟಿ. ಬಿ. ಜಯಚಂದ್ರ.—ಮಾನ್ಯ ಅಧ್ಯಕ್ಷರೆ, ಒಂದು ಸ್ಪಷ್ಟೀಕರಣವನ್ನು ಕೇಳುವುದಕ್ಕೆ ಇಚ್ಛಪಡುತ್ತೇನೆ. ಪ್ರಶ್ನೆ ಹಾಕಿದ ಸಂದರ್ಭದಲ್ಲಿ ಅರಣ್ಯ ಇಲಾಖೆಗೆ ಬರುತ್ತದೆಂದು ಗೊತ್ತಿದ್ದರೂ, ಬೇರೆ ಇಲಾಖೆಗೆ ಕಳುಹಿಸಿರುತ್ತಾರೆ. ಆದರೆ ನನಗೆ ಆನುಮಾನ ಬರುವುದೇನೆಂದರೆ ಸರ್ಕಾರ ಅಥವಾ ಸರ್ಕಾರದಲ್ಲಿರತಕ್ಕ ಅಧಿಕಾರಿಗಳು ಪೇಚಿಗೆ ಸಿಕ್ಕುವ ಸಂದರ್ಭದಲ್ಲಿ ಈ ತರಹ ಹಾರಿಕೆ ಉತ್ತರ ಕೊಡತಕ್ಕದ್ದು ಪರತ್ತು ತಳ್ಳಿ ಹಾಕಕಿಕ್ಕದ್ದು ನಡೆಯುತ್ತಿದೆ. ನಾನು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಮುಂದೆ ಸಂಬಂಧಪಟ್ಟ ಇಲಾಖೆಯ ಪ್ರಶ್ನೆಗಳು ಬರುವಾಗ ಮೊದಲು ನನ್ನ ಪ್ರಶ್ನೆಗೆ ಉತ್ತರ ಬರಬೇಕು. ಇದು ಬಹಳ ಪ್ರಮುಖವಾದ ಪ್ರಶ್ನೆ.

ಅಧ್ಯಕ್ಷರು.—ನಾನು ಆಗಲೇ ಹೇಳಿದ್ದೇನೆ. ಯಾವ ಪ್ರಶ್ನೆಗೆ ಇಲ್ಲಿ ಬಂದು ವರ್ಗಾಯಿಸಲಾಗಿದೆ ಎಂದು ಹೇಳುತ್ತಾರೋ ಅವನ್ನು ಮುಂದಿನ ವಾರ ಪ್ರೈಯಾರಿಟಿ ಬೇಸಿಸ್ ಮೇಲೆ ಹಾಕುತ್ತೇನೆ. ಅದನ್ನು ಮುಂದಿನವಾರ ತೆಗೆದುಕೊಳ್ಳೋಣ.

ಶ್ರೀ ಟಿ. ಬಿ. ಜಯಚಂದ್ರ.—ಆ ಭರವಸೆ ಕೊಟ್ಟರೆ ಅಭ್ಯಂತರವಿಲ್ಲ.

ಕೊಳ್ಳೇಗಾಲದಲ್ಲಿ ಬಡವರಿಗೆ ನಿವೇಶನಗಳ ಹಂಚಿಕೆ

೧೦೬೯. ಶ್ರೀ ಎಂ. ಸಿದ್ದಮಾದಯ್ಯ (ಕೊಳ್ಳೇಗಾಲ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಳ್ಳೇಗಾಲ ಟೌನಿನಲ್ಲಿ ರೆವಿನ್ಯೂ ಜಮೀನುಗಳನ್ನು ಕೊಂಡು ಕೆಲವು ಹಣವಂತರು ಅಲಿನೇಷನ್ ಮಾಡಿಸಿ ಸೈಟುಗಳನ್ನು ಮಾಡಿ ಹೆಚ್ಚು ಬೆಲೆಗಳಿಗೆ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಇದರಿಂದಾಗಿ ಬಡ ಜನರಿಗೆ ಹಾಗೂ ನಿವೇಶನರಹಿತ ಜನರಿಗೆ ಸೈಟು ದೊರೆಯದಿರುವುದು ಸರ್ಕಾರಕ್ಕೆ ತಿಳಿದಿದೆಯೇ ?

ಇ) ಹಾಗಿದ್ದಲ್ಲಿ ಆ ಜಮೀನುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು ಸೈಟುಗಳನ್ನು ಬಡ ಜನರಿಗೆ ಹಂಚಲು ಕ್ರಮ ಕೈಗೊಳ್ಳಲಾಗಿದೆಯೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಕೊಳ್ಳೇಗಾಲ ಟೌನಿನಲ್ಲಿ ರೈತರು ತಮ್ಮ ಸ್ವಂತ ಜಮೀನನ್ನು ನಿವೇಶನಗಳಾಗಿ ಅಲಿನೇಟ್ ಮಾಡಿಸಿಕೊಂಡಿರುತ್ತಾರೆ. ಆದರೆ ಅವರು ಹಣವಂತರು ಮತ್ತು ಸದರಿ ನಿವೇಶನಗಳನ್ನು ಹೆಚ್ಚು ಬೆಲೆಗೆ ಮಾರಾಟ ಮಾಡುತ್ತಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಇಲ್ಲ, ಬಡ ಜನರ ಸಲುವಾಗಿ ಕೊಳ್ಳೇಗಾಲ ಪುರಸಭೆಗೆ ೧೬ ಎಕರೆ ಜಮೀನು ಭೂಸ್ವಾಧೀನಪಡಿಸಿಕೊಂಡು ಬಡ ಜನರು ಹಾಗೂ ನಿವೇಶನ ರೈತರಿಗೆ ನಿವೇಶನ ಹಂಚಲು ಕ್ರಮಕೈಗೊಂಡಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಎಂ. ಸಿದ್ದಮಾದಯ್ಯ.—ಅಧಿಕಾರಿಗಳ ಗೃಹ ನಿರ್ಮಾಣಕ್ಕೆ ಹದಿನಾರು ಎಕರೆ ಜಮೀನು ಬೇಕೆಂದು ಕೇಳಿಕೊಂಡಾಗ ಪರ್ವಾಗಿಲ್ಲ ಎಂದು ತಾವು ಒಪ್ಪಿಕೊಂಡಿದ್ದೀರಿ. ಅದನ್ನು ಈಗ ಬಡಜನರಿಗೆ ಹಂಚುವುದಕ್ಕೆ ತೊಂದರೆಯಾಗಿವೆ ಅದಕ್ಕೆ ಅನುಕೂಲ ಮಾಡಿಕೊಟ್ಟು ಉಳಿದಿರತಕ್ಕ ಜಮೀನನ್ನು ಅಕ್ವೈರ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಕಾನೂನು ಚೌಕಟ್ಟಿನಲ್ಲಿ ಹೇಗೆ ಜಮೀನನ್ನು ಇಲಾಖೆಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಎಂದು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ಸಿದ್ದಮಾದಯ್ಯ.—ನಮ್ಮ ಸ್ಥಳ ಬಹಳ ಇಕ್ಕಟ್ಟಿನಿಂದ ಇದೆ. ಅಲ್ಲಿ ಅಧಿಕಾರಿಗಳ ಕ್ವಾರ್ಟರ್ಸ್‌ಕಟ್ಟಲಿಕ್ಕೆ ಅನುಕೂಲ ಮಾಡಿಕೊಡಬೇಕು. ಅಧಿಕಾರಿಗಳ ಅವಶ್ಯಕತೆ ಬಹಳ ಇದೆ. ಅಧಿಕಾರಿಗಳಿಲ್ಲದೆ ಪುರಸಭೆಯಲ್ಲಿ ಕೆಲಸಕಾರ್ಯಗಳು ನಡೆಯುತ್ತಿಲ್ಲ. ದಯವಿಟ್ಟು ಅದನ್ನು ವ್ಯವಸ್ಥೆ ಮಾಡಿಕೊಡಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ನಾನು ಮಾನ್ಯ ಸದಸ್ಯರ ಕ್ಷೇತ್ರಕ್ಕೆ ಒಂದಲ್ಲ ಅನೇಕ ಬಾರಿ ಹೋಗಿದ್ದೇನೆ. ಅದು ನನ್ನ ಕ್ಷೇತ್ರವೂ ಹೌದು. ಆಗಿಂದಾಗ್ಗೆ ಹೋಗಿ ಸಮಸ್ಯೆಯನ್ನು ತಿಳಿದು